ಸಂದರ್ಭದಲ್ಲಿ 65 ವರ್ಷಗಳೆಂಬ ಪ್ರಶ್ನೆ ಬಂತು.

ಅಧ್ಯಕ್ಷರು: ಈಗ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿರುವ ಸದಸ್ಯರು ಸಮಾಧಾನವಾಗಿದೆಯೆಂದು ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ,I will clarify. ಅದನ್ನು ಕೂಡ ಪರಿಗಣನೆಗೆ ತೆಗೆದುಕೊಂಡು ತಕ್ಷಣ ಆದೇಶ ಮಾಡುವ ಬಗ್ಗೆ ಎಲ್ಲಾ ತಯಾರಿಯನ್ನು ಮಾಡಿದ್ದೇವೆ, ತಕ್ಷಣವೇ ಮಾಡುತ್ತೇವೆ.

77(758) ಮತ್ತು 78(695)

ಅಧ್ಯಕ್ಷರು: ಮಾನ್ಯ ಎ. ಮಂಜುರವರ ಮತ್ತು ಡಾ: ಹೆಚ್.ಸಿ. ಮಹದೇವಪ್ಪನವರ ಪ್ರಶ್ನೆಗಳಿಗೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ.

ವಾಹನ ದಟ್ಟಣೆಯಿಂದಾಗುತ್ತಿರುವ ಅನಾನುಕೂಲ

79 (876) ಶ್ರೀ ಹಾಲಪ್ಪ ಹೆಚ್. (ಸೊರಬ) :– ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಸುಜಾತ ಚಿತ್ರಮಂದಿರದಿಂದ ಆನಂದರಾವ್ ಸರ್ಕಲ್‌ವರೆಗೆ ಪ್ರತಿದಿನ ರಾತ್ರಿ ಹಗಲೆನ್ನದೆ ಗಂಟೆಗಟ್ಟಲೆ ವಾಹನಗಳ ಜಾಮ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಇದರಿಂದ ರಾಜ್ಯದ ಎಲ್ಲಾ ಭಾಗದಿಂದ ಬರುವ ಪ್ರಯಾಣಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಮುಖ್ಯಮಂತ್ರಿಯವರು

(ಅ) ಬಂದಿದೆ

(ಆ) ಹೌದು

(ಇ) ಬೆಂಗಳೂರಿನ ಸುಜಾತ ಚಿತ್ರಮಂದಿರ ಮತ್ತು ಓಕಳಿಪುರಂ ಜಂಕ್ಷನ್‌ನಲ್ಲಿ ಆಗುತ್ತಿರುವ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸಲು ಓಕಳಿಪುರಂ ಜಂಕ್ಷನ್‌ಯಿಂದ ಫೌಂಟನ್ ವೃತ್ತದವರೆಗೆ ಲೂಪ್‌ಗಳೊಂದಿಗೆ 8 ಪಥದ ಕಾರಿಡಾರ್ ರಸ್ತೆ ಅಂಡರ್‌ಪಾಸ್

ಮತ್ತು ರೈಲ್ವೆ ಕೆಳಸೇತುವೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 115.50 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 547 ಎಂಎನ್ ವೈ 2010, ದಿನಾಂಕ 02–02–2011ರಂದು ಅನುಮೋದನೆ ನೀಡಲಾಗಿದೆ. ಈ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಓಕಳಿಪುರಂ ವೃತ್ತದ ಬಳಿ ಕೆಳಸೇತುವೆ ನಿರ್ಮಾಣ ಮಾಡಲು ಈಗಾಗಲೇ ಟೆಂಡರ್ ಮೂಲಕ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಸದರಿ ಪ್ರದೇಶದಲ್ಲಿ ರೈಲ್ವೆ ಇಲಾಖೆಗೆ ಸೇರಿದ 1332.00 ಚ.ಮೀ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಮೇಲ್ಕಂಡ ಜಾಗವು ಪಾಲಿಕೆಗೆ ರೈಲ್ವೆ ಇಲಾಖೆಯಿಂದ ಹಸ್ತಾಂತರವಾದ ನಂತರ, ಕಾಮಗಾರಿಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಿ, ಸುಗಮ ಸಂಚಾರ ವ್ಯವಸ್ಥೆಗೆ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಹಾಲಪ್ಪ: ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದೆ. ಮೆಜೆಸ್ಟಿಕ್ ಹತ್ತಿರ ರೈಲ್ವೆ ಸ್ಟೇಷನ್ ಮತ್ತು ಬಸ್‌ಸ್ಟ್ಯಾಂಡ್‌ಗೆ ಹೋಗುವಾಗ ಬಹಳ ಸಮಯ ತೆಗೆದುಕೊಳ್ಳುತ್ತದೆ. ಅದು ಹಗಲು ಅಷ್ಟೆ, ರಾತ್ರಿಯೂ ಅಷ್ಟೆ, ರಾತ್ರಿ ವೇಳೆ ಓಕಳಿಪುರಂನಿಂದ ಬಂದರೆ ರೈಲ್ವೆ ಸ್ಟೇಷನ್ ಅನ್ನು ಮುಟ್ಟುವುದಕ್ಕೆ ಆಗುವುದಿಲ್ಲ. ಅಲ್ಲಿ ರೈಲು ಹೋಗುತ್ತಿರುತ್ತದೆ, ಜನರು ಹೋಗುವುದಕ್ಕೆ ಆಗುವುದಿಲ್ಲ. ಅದಕ್ಕೆ ರೈಲ್ವೆ ಇಲಾಖೆಯಿಂದ ಜಾಗವನ್ನು ಕೇಳಿದ್ದೇವೆಂದು ಹೇಳುತ್ತಾರೆ. ರೈಲ್ವೆ ಇಲಾಖೆಯ ಜಾಗವನ್ನು ತೆಗೆದುಕೊಳ್ಳಲು ಪತ್ರವನ್ನು ಬರೆದುಕೊಂಡಿದ್ದರೆ ಆಗುವುದಿಲ್ಲ. ಇದರ ಬಗ್ಗೆ serious ಆಗಿ ಮಾಡಬೇಕು, follow up ಮಾಡುವುದಕ್ಕೆ ಯಾರೂ ಇಲ್ಲ, ಏಕೆಂದರೆ ಇಲ್ಲಿ ಬೆಂಗಳೂರಿನ ಎಂ.ಎಲ್.ಎ ಗಳು ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಕೌನ್ಸಿಲರ್‌ಗಳು ತಲೆಕೆಡಿಸಿಕೊಳ್ಳುವುದಿಲ್ಲ. ಹಾಗಾದರೆ ಇದನ್ನು ಯಾರು ಮಾಡಬೇಕು? ಬೇರೆ ಎಲ್ಲಾದರೂ ಈ ರೀತಿ ಆಗಿದ್ದರೆ, ಇಷ್ಟು ಹೊತ್ತಿಗೆ ಅಲ್ಲಿನ ಕೌನ್ಸಿಲರ್, ಮೇಯರ್ ಅಥವಾ ಬೆಂಗಳೂರಿನ ಎಂ.ಎಲ್.ಎ.ಗಳು ಫಾಲೋ ಅಪ್ ಮಾಡಿ ಇದನ್ನು ಮಾಡಿಸುತ್ತಿದ್ದರು. ಈ ಬಗ್ಗೆ ಮುಖ್ಯಮಂತ್ರಿಗಳು ಅಥವಾ ಸಂಬಂಧಪಟ್ಟ ಇಲಾಖೆಯವರು ವಿಶೇಷ ಕಾಳಜಿ ವಹಿಸಿದರೆ ಮಾತ್ರ ಇದು ಆಗುತ್ತದೆ. ಇಲ್ಲದಿದ್ದರೆ ಇನ್ನು 10 ವರ್ಷವಾದರೂ ಇದು ಆಗುವುದಿಲ್ಲ. ಅದಕ್ಕಾಗಿ ಶೀಘ್ರವಾಗಿ ಇದನ್ನು ಮಾಡುತ್ತೇವೆ ಎಂದು ಹೇಳಬೇಕು ಮತ್ತು ಅದನ್ನು ಮಾಡಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) ಸದಸ್ಯರಾದ ಹಾಲಪ್ಪನವರು

ಸತ್ಯಕ್ಕೆ ದೂರವಾದ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಬೆಂಗಳೂರಿನ ಯಾವುದೇ ಎಂ.ಎಲ್.ಎಗಳು ತಲೆಕೆಡಿಸಿಕೊಳ್ಳುತ್ತಿಲ್ಲ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಹಾಗೂ ತಲೆಕೆಡಿಸಿಕೊಂಡಿದ್ದಕ್ಕೋಸ್ಕರವೇ ಈ ಒಂದು ಯೋಜನೆ ಇವತ್ತು ಕಾರ್ಯಗತವಾಗುವ ಪರಿಸ್ಥಿತಿಗೆ ಬಂದಿದೆ. ಓಕಳಿಪುರಂ ಕಾರಿಡಾರನ್ನು Western Corridor ಎಂದೂ ಕರೆಯುತ್ತೇವೆ. ಅದು ಬೆಂಗಳೂರಿನ ಪಶ್ಚಿಮ ಭಾಗದ ಜನತೆ ಮೆಜೆಸ್ಟಿಕ್‌ಗೆ ಹೋಗುವುದಕ್ಕೆ ಕಾರಿಡಾರ್ ಆಗಿದೆ. ರಾಜ್ಯದ ಜನರೆಲ್ಲ ಬಸವೇಶ್ವರ ನಗರದಲ್ಲಿ ವಾಸ ಮಾಡುತ್ತಿದ್ದಾರೆ. ಅದೇ ಸಮಸ್ಯೆಯಾಗುತ್ತಿರುವುದು.

ಶ್ರೀ ಹೆಚ್. ಹಾಲಪ್ಪ: ನಾವು ಅಲ್ಲಿ ಸ್ವಲ್ಪ ದಿವಸ ಇರುತ್ತೇವೆ. ಇದು ನನ್ನೊಬ್ಬನ ಸಮಸ್ಯೆ ಅಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಇದನ್ನೆಲ್ಲ ಮನಗಂಡು ಮೊದಲನೇ ಹಂತವಾಗಿ ರಾಜಾಜಿನಗರದಲ್ಲಿ ನಾವು ಎಂಟ್ರೆನ್ಸ್ ಎಂದೇನು ಹೇಳುತ್ತೇವೆ, ಆ ಭಾಗದಲ್ಲಿ ಒಂದು ಗ್ರೇಡ್ ಸೆಪರೇಟರ್ ಅನ್ನು ಹಿಂದೆ ಮಾಡಿದ್ದೇವೆ. ಅದಾದ ನಂತರ, ರಾಜಾಜಿನಗರ ಎಂಟ್ರೆನ್ಸ್‌ನಿಂದ ರೈಲ್ವೆ ಸ್ಟೇಷನ್ ಹತ್ತಿರವಿರುವ ದೇವರಾಜ ಅರಸು ವೃತ್ತ ಅಥವಾ ಖೋಡೇಸ್ ಸರ್ಕಲ್‌ವರೆಗೂ ಒಂದು Signal free corridor ಮಾಡಬೇಕು ಎಂದು ಯೋಚನೆ ಮಾಡಿ ಅದಕ್ಕೆ ಎಲ್ಲ ರೂಪುರೇಷೆಗಳನ್ನು ತಯಾರಿಸಿ ಯೋಜನೆ ಸಿದ್ಧವಾಗಿದೆ. ಮೊದಲನೆಯದು, ಮಾಗಡಿ ರೋಡ್ ಜಂಕ್ಷನ್‌ನಲ್ಲಿ ಒಂದು ಅಂಡರ್‌ಪಾಸ್ ಮಾಡುವುದು, ಎರಡನೆಯದು ಅಲ್ಲಿಂದ ಖೋಡೇಸ್ ಸರ್ಕಲ್‌ಗೆ ಎಂಟು ಪಥದ ರಸ್ತೆ ಮಾಡುವುದು. ಹಾಲಪ್ಪನವರು ಹೇಳಿರುವುದು ನೂರಕ್ಕೆ ನೂರು ಸತ್ಯ. ಇವತ್ತು ರೈಲ್ವೆ ನಿಲ್ದಾಣ ಕೂಡ ಬಹಳ ವೇಗವಾಗಿ ಬೆಳೆಯುತ್ತಿದ್ದು, ಅವರು ಪ್ಲಾಟ್ ಫಾರಂಗಳನ್ನು ಕೂಡ ಜಾಸ್ತಿ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಬಿ.ಬಿ.ಎಂ.ಪಿ. ಮತ್ತು ರೈಲ್ವೆ ಇಲಾಖೆ ಎರಡೂ ಸೇರಿದಂತೆ ಈ ಯೋಜನೆಯನ್ನು ರೂಪಿಸಿದ್ದೇವೆ. ರೈಲ್ವೆ ನಿಲ್ದಾಣಕ್ಕೆ ಹೋಗಲಿಕ್ಕೆ ಮತ್ತು ಬರಲಿಕ್ಕೆ ಇರುವ ಅಗತ್ಯತೆಯನ್ನು ಮನಗಂಡು ನಾವು ಇದನ್ನು ಮಾಡಿದ್ದೇವೆ. ಸುಮಾರು 115 ಕೋಟಿ ರೂಪಾಯಿಗಳಿಗೆ ಈ ಯೋಜನೆ ತಯಾರಾಗಿದೆ. ಇದಕ್ಕೆ ಸರ್ಕಾರ ಕೂಡ ಈ ವರ್ಷ ಫೆಬ್ರವರಿಯಲ್ಲಿ ಸಚಿವ ಸಂಪುಟದ ಸಭೆಯಲ್ಲಿ ಅನುಮೋದನೆ ಕೊಟ್ಟಿದೆ. ಮೊದಲನೇ ಬಾರಿ ನಾವು Pre-qualifcation tender ಅನ್ನು ಕರೆದೆವು. ಆದರೆ ದುರಾದೃಷ್ಟವಶಾತ್ ಅದಕ್ಕೆ ಬಂದದ್ದು ಒಬ್ಬರೇ ಒಬ್ಬರು. ಅದಕ್ಕೋಸ್ಕರ ಅದನ್ನು ರದ್ದು ಮಾಡಿ ಎರಡನೇ ಸಲ

ನಾವು Pre-qualifcation tender ಅನ್ನು ಕರೆದಿದ್ದೇವೆ. ಈ ವಿಚಾರದಲ್ಲಿ ಬಿ.ಬಿ.ಎಂ.ಪಿ., ರೈಲ್ವೆ ಇಲಾಖೆ ಮತ್ತು ನಾವೆಲ್ಲರೂ ಕೂಡ ಅನೇಕ ಸಭೆಗಳನ್ನು ಮಾಡಿದ್ದು, ರೈಲ್ವೆ ಜಮೀನನ್ನು ಈ ಕಾರ್ಯಕ್ಕೋಸ್ಕರ ತೆಗೆದುಕೊಳ್ಳಲು ಒಪ್ಪಿಗೆ ಸಿಕ್ಕಿದೆ. ಅದರ ಬದಲಿಗೆ ಅವರಿಗೆ ಬಿನ್ನಿಮಿಲ್ ಬಳಿಯಿರುವ ಸುಮಾರು ಒಂದು ಎಕರೆ ಜಾಗ, ಶೇಷಾದ್ರಿ ರಸ್ತೆಯಲ್ಲಿರುವ ಸುಮಾರು ಅರ್ಧ ಎಕರೆ ಜಾಗ ಮತ್ತು ಮಿಲ್ಲರ್ ಟ್ಯಾಂಕ್ ಬಳಿ ಇರುವ ಜಾಗಗಳನ್ನು ಕೊಡಲು ಪ್ರೊಸೆಸ್‌ಅನ್ನೂ ನಾವು ಶುರು ಮಾಡಿದ್ದೇವೆ. ಈಗ ಇದು ಕೊನೆಯ ಹಂತದಲ್ಲಿದ್ದು, ಜನವರಿ ತಿಂಗಳಲ್ಲಿ ಈ ಕಾಮಗಾರಿ ಪ್ರಾರಂಭವಾಗುತ್ತದೆ ಎನ್ನುವ ವಿಶ್ವಾಸ ನನಗಿದೆ. ಸನ್ಮಾನ್ಯ ಹಾಲಪ್ಪನವರನ್ನೂ ಅದಕ್ಕೆ ಮುಖ್ಯ ಅತಿಥಿಯನ್ನಾಗಿ ಕರೆದು ಈ ಕಾಮಗಾರಿಯ ಕಾರ್ಯಕ್ರಮವನ್ನು ನೆರವೇರಿಸುತ್ತೇವೆ. ಒಟ್ಟಾರೆ ಇದು ಬಹಳ ಅಗತ್ಯವಾಗಿ ಆಗಬೇಕಾದಂಥ ಸಂಗತಿ. ಇದನ್ನು ಜ್ಞಾಪಿಸಿಕೊಂಡು ಪ್ರಸ್ತಾಪಿಸಿರುವುದಕ್ಕೆ ನಾನು ಹಾಲಪ್ಪನವರಿಗೆ ಧನ್ಯವಾದವನ್ನು ಹೇಳುತ್ತೇನೆ. ಈಗಾಗಲೇ ಅಂಡರ್‌ಪಾಸ್ ಕೆಲಸವನ್ನು 10.62 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಾವು ಶುರು ಮಾಡಿದ್ದೇವೆ. 115 ಕೋಟಿ ರೂಪಾಯಿಯ ಮೇಜರ್ ಕೆಲಸ ಪ್ರಾಯಶ: ಜನವರಿ ತಿಂಗಳಲ್ಲಿ ಪ್ರಾರಂಭವಾಗುತ್ತದೆ.

2 **ಶ್ರೀ ಹೆಚ್. ಹಾಲಪ್ಪ:** ಹಾಲ್ಪಪ್ಪನವರು ಅಲ್ಲಿ ಮನೆ ಮಾಡಿದ್ದಾರೆ, ಅವರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದರು. ನಾನು ತಾತ್ಕಾಲಿಕವಾಗಿ ಅಲ್ಲೊಂದು ಮನೆ ಮಾಡಿದ್ದೇನೆ. ಆದರೆ ತೊಂದರೆಯಾಗುತ್ತಿರುವುದು ಈ ರಾಜ್ಯದಾದ್ಯಂತ ಬರುತ್ತಿರುವ ಎಲ್ಲರಿಗೆ ಹೇಗೆ ತೊಂದರೆಯಾಗುತ್ತಿದೆ ಎಂದರೆ ತಾವು ಯಾವತ್ತಾದರೂ ರಾತ್ರಿ ಹುಬ್ಬಳ್ಳಿಯಿಂದ ಬಸ್ಸಿಗೆ ಹತ್ತಿ ಮರುದಿನ ಬೆಳಿಗ್ಗೆ ಏಳು ಗಂಟೆಗೆ ಇಲ್ಲಿಗೆ ಬನ್ನಿ; ಆಗ ನಿಮಗೇ ಗೊತ್ತಾಗುತ್ತದೆ. ಇಲ್ಲಿರುವ ಹುಬ್ಬಳ್ಳಿಯ ಎಲ್ಲ ಎಂ.ಎಲ್.ಎ. ಗಳೂ ಈ ತೊಂದರೆಯನ್ನು ಅನುಭವಿಸಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಎಲ್.ಹೆಚ್.ನಿಂದ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಹೋಗಲು ಸುಮಾರು ಒಂದು ಗಂಟೆ ಬೇಕಾಗುತ್ತದೆ ಆದ್ದರಿಂದ ತ್ವರಿತವಾಗಿ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ನೆ.ಲ. ನರೇಂದ್ರಬಾಬು: ನಾನು ಮಾನ್ಯ ಸಚಿವರಲ್ಲಿ ಒಂದೇ ಒಂದು ವಿನಂತಿ ಮಾಡುತ್ತೇನೆ, ಹಿಂದೆ ಅವರೂ ಕೂಡ ಶಾಸಕರಾಗಿದ್ದರು, ಉಲ್ಲಾಸ್ ಥಿಯೇಟರ್ ಜಂಕ್ಷನ್‌ಗೂ ಯಶವಂತಪುರ ರೈಲ್ವೆ ಸ್ಟೇಷನ್‌ಗೂ ಒಂದು ಸಂಪರ್ಕ ಕಲ್ಪಿಸಬೇಕಾಗುತ್ತದೆ. ಪ್ರತಿದಿನ 40 ರಿಂದ 50 ಸಾವಿರ ಜನ ಗಾರ್ಮೆಂಟ್ ವರ್ಕರ್ಸ್ ಓಡಾಡುತ್ತಾರೆ. ಅಲ್ಲಿ ಒಂದು ಅಂಡರ್

ಪಾಸ್ ಬೇಕೆಂದು ಕೇಳಿದ್ದೆವು. ದಯವಿಟ್ಟು ಅದನ್ನು ಮಾಡಬೇಕು. ಇದನ್ನು ಮೊದಲೇ ಇಸ್ಕಾನ್ ಮುಂದೆ ಮಾಡಿ ಎಂದು ಮೆಟ್ರೋ ರೈಲಿನವರಿಗೂ ಕೇಳಿದೆವು, ಅದೂ ಮಾಡಲಿಲ್ಲ. ಹಾಗಾಗಿ, ಅಲ್ಲಿ ತುಂಬ ಅನಾಹುತಗಳು, ಅಪಘಾತಗಳಾಗುತ್ತಿವೆ. ತಾವು ಆ ಬಗ್ಗೆ ಆಸಕ್ತಿ ವಹಿಸಿದರೆ ಒಳ್ಳೆಯದು.

ಶ್ರೀ ಎಸ್. ಸುರೇಶ್ ಕುಮಾರ್: ಅದನ್ನು ಪರಿಶೀಲಿಸುತ್ತೇವೆ.

80(146) ಮತ್ತು 81(432) (ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಶುದ್ಧ ಕುಡಿಯುವ ನೀರು ಸರಬರಾಜು

82(92) ಶ್ರೀ ಹೆಚ್.ಸಿ ಬಾಲಕೃಷ್ಣ(ಮಾಗಡಿ) :– ನಗರಾಭಿವೃದ್ಧಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)

(ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬೈರಮಂಗಲ ಕೆರೆಗೆ ಬೆಂಗಳೂರಿನ ಕಲುಷಿತ ನೀರು ಬರುತ್ತಿರುವುದರಿಂದ ಸುತ್ತಮುತ್ತಲ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೈರಮಂಗಲ ಕೆರೆಯನ್ನು ಪುನಶ್ಚೇತನಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಈ ಕೆರೆಯನ್ನು ಪುನಶ್ಚೇತನಗೊಳಿಸಲು ಇದುವರೆವಿಗೂ ಎಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ;

(ಇ) ಬೈರಮಂಗಲ ಕೆರೆಯು ಕಲುಷಿತಗೊಂಡಿರುವುದರಿಂದ ಶುದ್ಧ ಕುಡಿಯುವ ನೀರು ದೊರೆಯದೆ ಸುತ್ತಮುತ್ತಲ ಮೂರು ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದರಿಂದ ಕಾವೇರಿ ನೀರನ್ನು ಎಷ್ಟು ಅವಧಿಯಲ್ಲಿ ಒದಗಿಸಲಾಗುವುದು;

(ಈ) ಈ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎಸ್. ಸುರೇಶ್ ಕುಮಾರ್: (ನಗರಾಭಿವೃದ್ಧಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)